## 26

# “ತೀರ್ಪು ಮಾಡಬೇಡಿರಿ”

## ಮತ್ತಾಯ 7:1-12, ವಚನಗಳು 1, 2ರ, ಒಂದು ನಿಕಟ ನೋಟ

ಕ್ರಿಸ್ತೀಯ ಜೀವಿತದಲ್ಲಿ ಇರುವುದಕ್ಕಾಗಿ ನಾವು ಹೊಂದಿರುವ ಸವಾಲುಗಳಲ್ಲಿ ಒಂದೆಂದೆಂದರೆ ಜನರೊಡನೆ ಸಾಗುವುದೇ ಆಗಿದೆ. ಯೇಸು ಇದನ್ನು ಅರ್ಥೈಸಿಕೊಂಡನು, ಅಂತೆಯೇ ಆತನು ತನ್ನ ಪರ್ವತ ಪ್ರಸಂಗದಲ್ಲಿ ಮನುಷ್ಯ ಸಂಬಂಧಗಳ ಬಗೆಗೆ ಹೆಚ್ಚಾಗಿ ಹೇಳಿದ್ದಾನೆ. ಇತರೆಡೆಗೆ ಕರುಣೆಯುಳ್ಳವರಾಗಿರಿ (5:7) ಮತ್ತು ಶಾಂತಮನಸ್ಕರಾಗಿರಿ (5:9) ಎಂದು ಆತನು ಹೇಳಿದ್ದಾನೆ. ಪ್ರತಿಯೊಬ್ಬ ಕೇಳುಗನೂ ಉತ್ತಮ ಪ್ರಭಾವವನ್ನು ಹೊಂದಿರ ಬೇಕೆಂದು ಆತನು ಪ್ರೋತ್ಸಾಹಿ ಸುವವನಾಗಿದ್ದಾನೆ (5:13-16). ಸಹೋದರನ ಮೇಲೆ ಕೋಪಗೊಳ್ಳದಿರು ಆದರೆ ಆತನೊಡನೆ ಸಮಾಧಾನದಿಂದಿರು ಎಂದು ಆತನು ಹೇಳಿದ್ದಾನೆ (5:21-26). ನಮ್ಮನ್ನು ನೋಯಿಸಲು ಪ್ರಯತ್ನಿಸುವವರತ್ತ (ನಮ್ಮ ವೈರಿಗಳತ್ತ) ನಾವು ಎಂಥ ಸಂಬಂಧವನ್ನು ಹೊಂದಿರಬೇಕೆಂದೂ ಸಹ ಕ್ರಿಸ್ತನು ಹೇಳುತ್ತಾನೆ (5:38-48). ಈಗ ಮತ್ತಾಯ 7:1-12ರಲ್ಲಿನ ಈ ವಿಷಯದ ಮೇಲೆ ಯೇಸುವಿನ ಬೋಧನೆಯ ಸಂಪೂರ್ಣ ಮುಖ್ಯ ಭಾಗದೆಡೆಗೆ ನಾವು ಬಂದಿದ್ದೇವೆ. ಈ ಹನ್ನೆರಡು ವಚನಗಳು ಇತರರೊಡನೆ ಹೇಗೆ ಹೊಂದಿಕೊಂಡಿರಬೇಕೆಂದಿರುವುದರ ಬಗೆಗೆ ನಮಗೆ ಹೇಳುತ್ತದೆ.

ಪರ್ವತ ಪ್ರಸಂಗವು ನಮ್ಮ ಜೀವಿತದ ಮೇಲೆ ಬೆಳಗುವ ದೊಡ್ಡ ಬೆಳಕಿನಂತೆಯೂ ಮತ್ತು ನಮ್ಮ ಬಲಹೀನತೆಗಳನ್ನು ಹೊರಹಾಕುವಂತೆಯೂ ಇದೆ. ಈ ಪ್ರಸಂಗದಲ್ಲಿ, ಮತ್ತು ಮುಂದಿನದರಲ್ಲಿ ದೇವರ ವಾಕ್ಯದ ಪ್ರಕಾರ ಬೆಳಕಿನ ಮೂಲಕ ನಾನು ನಿನ್ನ ಮೇಲೆ ಹೊಳೆದ ದ್ದಾದರೆ ಕೆಲ ಅಸಂತುಷ್ಟವಾದ ಕ್ಷಣಗಳನ್ನು ನೀನು ಹೊಂದಬಹುದು. ಗಂಟೆಗಟ್ಟಲೆ ನಾನು ಈ ಮಂಡನೆಗೋಸ್ಕರ ನಾನು ಕೆಲಸ ಮಾಡುತ್ತಿದ್ದೇನೆ, ವಾಕ್ಯ ಭಾಗಗಳ ಜೊತೆ ಹೋರಾ ಡುತ್ತಾ, ವಿಭಿನ್ನವಾದ ಭಾಷಾಂತರಗಳಿಂದ ಓದುತ್ತಾ, ತಿರುಗಿ ಓದುತ್ತಾ ಇದ್ದೇನೆ ಎಂಬುದನ್ನು ಅರಿತುಕೊಳ್ಳಿರಿ. ನಾನು ಮೂರು ನೂರಕ್ಕಿಂತ ಹೆಚ್ಚಿನ ಪುಟಗಳ ಬಾಷ್ಯಗಳನ್ನು ಓದಿದ್ದೇನೆ, ಗುರುತುಹಾಕಿದ್ದೇನೆ ಮತ್ತು ಪುನರಾವರ್ತಿಸಿದ್ದೇನೆ. ಆ ಸಮಯದಲ್ಲೆಲ್ಲಾ ಪ್ರಭೆಯು ನನ್ನ ದೌರ್ಬಲ್ಯವನ್ನು ಹೊರಹಾಕುತ್ತಾ ನನ್ನ ಮೇಲೆ ಹೊಳೆಯುತ್ತಿತ್ತು. ನಾನು ನನ್ನ ಕೆಟ್ಟ ವಿಚಾರಗಳ ಜೊತೆ ಹೋರಾಡಿದ್ದೇನೆ, ಮತ್ತು ಈ ಪರಿಚ್ಛೇದವು ಅವುಗಳ ಮೇಲೆ ಕೇಂದ್ರಿಕರಿಸುವವುಗಳು ಆಗಿವೆ. ಚಡಿಪಡಿಸುವ ಕೆಲ ಕ್ಷಣಗಳನ್ನು ನೀನು ಅನುಭವಿಸಿರಬಹುದು, ಆದರೆ ನಾನು ಅತ್ಯುಗ್ರವಾದ ಪರಿಶೋಧನೆಗಳ ತಾಸನ್ನು ನಮ್ಮ ವೇದಭಾಗದಿಂದ ಹೊಂದಿದ್ದೇನೆ ಎಂಬುದರ ಬಗೆಗೆ ನೀವು ನಿಶ್ಚಿಂತವಾಗಿರ್ರಿ.

ವಚನ 1 ರಿಂದ 12ರವರೆಗಿನ ವಚನಗಳನ್ನು ನಾವು ವಿವರವಾಗಿ ಅಧ್ಯಾಯ ಮಾಡುವುದಕ್ಕಿಂತ ಮುಂಚೆ, ಈ ಸಮಸ್ತ ಪರಿಚ್ಛೇದವನ್ನು ಇತರರೊಡನೆ ಹೊಂದಿಕೊಳ್ಳುವದು ಎಂಬ ನನ್ನ ಪ್ರಸಂಗದಲ್ಲಿ ಯಾಕೆ ಸೇರಿಸಿಕೊಂಡೆ ಎಂದು ನಾನು ನಿಮಗೆ ಹೇಳುವವನು ಆಗಿದ್ದೇನೆ. 1 ರಿಂದ 6 ವಚನಗಳು ನ್ಯಾಯತೀರ್ಪಿನ ಬಗೆಗೆ ಮತ್ತು ದೇವರ ವಸ್ತುಗಳನ್ನು ನಾಯಿಗೆ ಹಾಕಬೇಡಿರಿ ಎಂದು ಹೇಳುವಂತವು ಹೆಚ್ಚು ಕಡಿಮೆ ನಿಶ್ಚಿತವಾಗಿ ಸಂಬಂಧಗಳ ಬಗೆಗೆ ತಿಳಿಸುವವುಗಳು ಆಗಿವೆ. ಮುಂದೆ 7 ನೇಯ ವಚನದಿಂದ 11ನೇಯ ವಚನದಲ್ಲಿ ಯೇಸು ಪ್ರಾರ್ಥನೆ ಮತ್ತು ಅದರ ಪರಿಣಾಮವನ್ನು ಕಲಿಸಿದನು. ವಚನ 12ರಲ್ಲಿ ಹೇಳುವಂತೆ, “ಅಂತೂ …” ಮತ್ತು ನಂತರದಲ್ಲಿ ಇತರರೊಡನೆ ಹೇಗೆ ಸಾಮರಸ್ಯವಾಗಿ ಇರಬೇಕು

ಎಂಬುದಕ್ಕೆ ಪರ್ಯಾಯ ಸೂಚನೆಯಾದ ಬಂಗಾರದ ನಿಯಮವನ್ನು ಹೊರತು ಆತನು ಸಂಬಂಧದ ವಿಷಯವನ್ನು ಬಿಟ್ಟುಬಿಟ್ಟನು ಎಂದು ನಾವು ಯೋಚಿಸಬಹುದು. "ಅಂತೂ" ಎಂಬ ಪದವು ಯೇಸು ತನ್ನ ಅಂಶವನ್ನು ಮುಕ್ತಾಯಗೊಳಿಸುತ್ತಿದ್ದಾನೆಂದು ಸೂಚಿಸುತ್ತದೆ - ಅದನ್ನು ಸಂಕ್ಷಿಪ್ತವಾಗಿ ಹೇಳಿ ಮುಗಿಸಿದರು. ಹಾಗೆ, ಅದೇ ಪದ್ಧತಿಯಲ್ಲಿ 7ರಿಂದ 11ನೇ ವಚನದವರೆಗೆ ಚರ್ಚಿಸಿದ ಅಂಶಕ್ಕೆ ಸಂಬಂಧಿಸಿದ್ದಾಗಿದೆ. ಈ ಕಾರಣದಿಂದ 1ನೇ ವಚನದಿಂದ 12ನೇ ವಚನದವರೆಗೆ ಧ್ಯಾನಿಸುವ ವಾಕ್ಯ ಭಾಗದಲ್ಲಿ ಜನರೊಡನೆ ಸಾಗುವುದಕ್ಕೋಸ್ಕರವೆಂಬ ಅಂಶವನ್ನು ಸೇರಿಸೋಣ.

ಇತರರೊಡನೆ ಹೊಂದಿಕೊಳ್ಳುವುದಕ್ಕೆ ಅವಶ್ಯಕವಾದ ಆರು ಸತ್ಯಗಳನ್ನು ನಾನು ನಮ್ಮ ವೇದಭಾಗದಿಂದ ತೆಗೆಯುವವನಾಗಿದ್ದೇನೆ. ಈ ಪ್ರಸಂಗದಲ್ಲಿ[1] ನಾನು ಈ ಮೊದಲಿನವುಗಳನ್ನು ಮತ್ತು ಕೇವಲ ಎರಡು ವಚನಗಳಲ್ಲಿ ಮಾತ್ರ ಮುಗಿಸತ್ತೇನೆ. ಮೊದಲ ಎರಡು ವಚನಗಳು ತೀರ್ಪನ್ನು ನೀಡುವವು, ಆದುದರಿಂದ ಈ ಮಂಡನೆಯನ್ನು ನಾನು "ತೀರ್ಪು ಮಾಡಬೇಡಿರಿ"[2] ಎಂದು ಕರೆಯುವವನಾಗಿದ್ದೇನೆ. ಮುಂದೆ ಇರುವ ಪ್ರಸಂಗದಲ್ಲಿ ಉಳಿದ ಐದು ಸತ್ಯಗಳನ್ನು ನಾನು ಚರ್ಚಿಸುವವನಾಗಿದ್ದೇನೆ.

## ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 1:
## ತೀರ್ಪುಮಾಡುತ್ತಾ ಇರುವುದನ್ನು ನಾವು ನಿಲ್ಲಿಸಲೇಬೇಕು (ವಚನಗಳು 1, 2)

### ಯೇಸು ಆಜ್ಞಾಪಿಸಿದ್ದೇನು (ವಚನ 1)

*ನಾವು ಇತರರೊಡನೆ ಹೊಂದಿಕೊಳ್ಳಬೇಕಾದದ್ದೇ* ಆದರೆ, ಯೇಸು ಹೇಳುವುದೇನೆಂದರೆ ನಾವು ತೀರ್ಪುಮಾಡುವುದನ್ನು ನಿಲ್ಲಿಸಬೇಕು. ಈ ಪರಿಚ್ಛೇದವು "ತೀರ್ಪು ಮಾಡಬೇಡಿರಿ" ಎಂದು ಆರಂಭವಾಗುತ್ತದೆ (ವಚನ 1). ಮೂಲ ವೇದಭಾಗದಲ್ಲಿ, ಬಳಕೆಯಾದ ರೀತಿಯು ಆತನ ಕೇಳುಗರಿಗೆ ತೀರ್ಪುಮಾಡುವುದನ್ನು ನಿಲ್ಲಿಸುವದು ಅವಶ್ಯವಿದೆ ಎಂದು ಸೂಚಿಸುವುದಾಗಿದೆ. ವಿಲಿಯಂರ ಭಾಷಾಂತರದಲ್ಲಿ "ಇತರರನ್ನು ಟೀಕಿಸುವುದನ್ನು ನಿಲ್ಲಿಸಿರಿ" ಎಂದಿದೆ.[3]

ಸಂಬಂಧಗಳ ವಿಭಾಗದ ಮೇಲೆ, ಸುಂದರವಾದ ಬಂಗಾರದ ನಿಯಮಕ್ಕೆ ಸಾಮಿಪ್ಯವಿರುವದಕ್ಕೆ ನಕಾರಾತ್ಮಕತೆಯ ಮಾರ್ಗದ ಆರಂಭ ಎಂದು ಮೊದಲ ವಿಚಾರದಲ್ಲಿ ಕಂಡುಬರುತ್ತದೆ.

#### ಸಾರ್ವತ್ರಿಕವಾದ ಅವಶ್ಯಕತೆಯನ್ನು ಪೂರೈಸುವದು

ತೀರ್ಪುಮಾಡುವುದರ ಬಗೆಗೆ ಎಚ್ಚರಿಸುವದರ ಜೊತೆಗೆ ಯೇಸು ಪ್ರಾರಂಭಿಸುವ ವನಾಗಿರಬಹುದು. ಯಾಕೆಂದರೆ ಈ ಬುದ್ಧಿವಾದ ಆತನ ಎಲ್ಲಾ ಕೇಳುಗರಿಗೆ ಅವಶ್ಯವಿದೆ. ಯಾಕೆಂದರೆ ನಮಗೆ ಈ ಬುದ್ದಿವಾದದ ಅವಶ್ಯವಿದೆ. ಮತ್ತಾಯ 7:1ರಲ್ಲಿನ ಯೇಸುವಿನ ಆಜ್ಞೆಯನ್ನು ನಮ್ಮಲ್ಲಿ ಪ್ರತಿಯೊಬ್ಬರು ಉಲ್ಲಂಘಿಸದಿರುವ ಮೂಲಕ ಬಹುಶಃ, ಯಾವ ಇಪ್ಪತ್ನಾಲ್ಕು ತಾಸುಗಳ ಅವಧಿಯು ಸಾಗದು. ಈ ಒಂದು ಆಜ್ಞೆಗೆ ವಿಧೇಯರಾಗಿರುವದು ಹೆಚ್ಚಾಗಿ ಬಲು ಬೇಗನೇ ಒಂದು ಸಂಬಂಧವನ್ನು ಹಾಳುಮಾಡಿಕೊಳ್ಳದಿರುವುದಾಗಿದೆ.

#### ಕೆಟ್ಟ ಪ್ರಭಾವದ ಚಿಗುರೊಡೆಯುವಿಕೆ

ಯೇಸು ತೀರ್ಪು ಮಾಡುವ ಈ ವಿಷಯವನ್ನು ಪ್ರಸ್ತಾಪಿಸಿದ ಇನ್ನೊಂದು ಸಾಧ್ಯತೆಯೆಂದರೆ ಶಾಸ್ತ್ರಿಗಳು ಮತ್ತು ಫರಿಸಾಯರು ಆತನ ಮನದಿಂದ ಎಂದಿಗೂ

ದೂರವಿರಲಿಲ್ಲ. ಆತನಲ್ಲಿ ತಪ್ಪನ್ನು ಹುಡಕಲು ಪ್ರಯತ್ನಿಸುತ್ತಾ ಅದನ್ನು ಆತನನ್ನು ಹಿಯಾಳಿಸಲು ಬಳಸಲು ಅವರು ಈಗಾಗಲೇ ಆತನು ಎಲ್ಲಿ ಹೋಗುತ್ತಾನೋ ಅಲ್ಲೆಲ್ಲ ಆತನನ್ನು ಹಿಂಬಾಲಿಸುತ್ತಿದ್ದರು (ಲೂಕ 6:1-7). ಈಗಾಗಲೇ ಆತನ ವೈರಿಗಳು (ಫರಿಸಾಯರನ್ನು ಒಳಗೊಂಡು) ಆತನನ್ನು ಕೊಲ್ಲಲು ಯೋಜನೆಯನ್ನು ರೂಪಿಸುತ್ತಾ ಇದ್ದರು (ಯೋಹಾನ 5:18).

ಹೀಗೆ, ಪರ್ವತ ಪ್ರಸಂಗದಲ್ಲಿ, ಯೇಸು ಅನೇಕ ಉದಾಹರಣೆಗಳನ್ನು ಪರೋಕ್ಷವಾಗಿ ಅಪರೋಕ್ಷವಾಗಿ ಅವರಿಗಾಗಿ ಮಾಡಿದನು. ಮತ್ತಾಯ 5:20ರಲ್ಲಿ ಆತನು "ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕ ರಾಜ್ಯದಲ್ಲಿ ಸೇರಲಾರಿರಿ ..." ಎಂದು ಹೇಳಿದನು. 5ನೇಯ ಅಧ್ಯಾಯದಲ್ಲಿ ನಂತರದ ಭಾಗದಲ್ಲಿ ಧರ್ಮಶಾಸ್ತ್ರದ ಸಂಪ್ರದಾಯಗಳನ್ನು ತನ್ನ ಬೋಧನೆಯ ಜೊತೆ ಹೋಲಿಸುವವನಾಗಿದ್ದಾನೆ; ಈ ಸಂಪ್ರದಾಯಗಳು ಫರಿಸಾಯರಿಂದ ಕಾಯ್ದಿಡಲ್ಪಟ್ಟವುಗಳು ಆಗಿದ್ದವು. 6ನೇಯ ಅಧ್ಯಾಯದ ಮೊದಲ ಭಾಗದಲ್ಲಿ, ಕಪಟಿಗಳು ದಾನಕೊಡುವಾಗ ಕೊಂಬೂದಿಸಿಕೊಳ್ಳುವದರ, ಬೀದಿಯ ಚೌಕಗಳಲ್ಲಿ ನಿಂತು ಕೊನೆಯಿಲ್ಲದ ಪುನರಾವರ್ತನೆಯಿಂದ ಪ್ರಾರ್ಥಿಸುವದರ, ತಾವು ಉಪವಾಸವಿರುವದು ಪ್ರತಿಯೊಬ್ಬರಿಗೂ ತಿಳಿಯಬೇಕೆಂದು ಬಯಸುವವರ ಬಗೆಗೆ ಮಾತನಾಡಿದನು. ಆತನ ಈ ವಿವರವು ಫರಿಸಾಯರ ಬಗೆಗೆ ಎಂದು ಪ್ರತಿಯೊಬ್ಬರೂ ಅರಿತುಕೊಳ್ಳಬಹುದಿತ್ತು.[4]

ಶಾಸ್ತ್ರಿ ಮತ್ತು ಫರಿಸಾಯರು, ಯೇಸು ಗದರಿಸಿದ ತರದ ನ್ಯಾಯತೀರ್ಪಿನ ದೋಷದಲ್ಲಿ ಇದ್ದರು. ಅವರು ಸುಂಕದವರನ್ನು (ಲೂಕ 18:9-14), ಸಮಾರ್ಯದವರನ್ನು, ಮತ್ತು ಅನ್ಯ ಜನರನ್ನು ಹೀಗೆ ಹೆಚ್ಚಾದ ಭಾಗದ ಸಮಾಜವನ್ನು ನಿಂದಿಸುವವರಾಗಿದ್ದರು. ಮುಂದೆ, ಅವರು ತಮ್ಮನ್ನು ತಾವು ಪ್ರತಿಯೊಬ್ಬರಿಗಿಂತ ಶ್ರೇಷ್ಟರು ಎಂದು ಪರಿಗಣಿಸುವವರಾಗಿದ್ದರು. ಇತರರನ್ನು ಅವರು ಕೇವಲವಾಗಿ ಮತ್ತು ಕಾರುಣ್ಯ ರಹಿತವಾಗಿ ನೋಡುತ್ತಿದ್ದರು. ನಾವು ಇತರರೊಡನೆ ಹೊಂದಿಕೊಳ್ಳಬೇಕಾದರೆ, ನಮ್ಮ ನೀತಿವಂತಿಕೆಯು ಶಾಸ್ತ್ರಿಗಳು ಮತ್ತು ಫರಿಸಾಯರನ್ನು ಮೀರಿಸುವಂತದ್ದಾಗಿರಲೇಬೇಕು.

**ನಕಾರಾತ್ಮಕವಾದ ಸಂಗತಿಯನ್ನು ತೆಗೆದುಹಾಕುವದು**

ಯೇಸು ತಾನು ಹೇಳಿದಂತೆಯೇ ಮಾಡಲು ಪ್ರಾರಂಭಿಸಿದನು. ಯಾಕೆಂದರೆ ಸಕಾರಾತ್ಮಕ ವಾಗಿರುವುದಕ್ಕಿಂತ ಮುಂಚೆನಕಾರಾತ್ಮಕ ಸಂಗತಿಯ ಸಂಬಂದವನ್ನು ತೆಗೆದುಹಾಕುವುದಕ್ಕಾಗಿ ಆತನು ಇಚ್ಚಿಸಿದ್ದನು. ಹೂ ಗಿಡಗಳನ್ನು ನೆಡುವ ಮುನ್ನ ನಾವು, ಕೆಲವು ಸಾರಿ ನಾವು ಕಳೆ ಯನ್ನು ತೆಗೆಯುತ್ತೇವೆ.

ಯಾವುದೇ ಕಾರಣಕ್ಕೋಸ್ಕರವಾಗಿರಲಿ, "ತೀರ್ಪುಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ" ಎಂಬುದರಿಂದ ಯೇಸು ಕ್ರಿಸ್ತನು ಪ್ರಾರಂಭಿಸಿದನು.

## ಯಾವದು ಯೇಸುವಿನ ಉದ್ದೇಶವಾಗಿರಲಿಲ್ಲ (ವಚನ 1)

ಐಹಿಕಮನದ ಮತ್ತು ಸತ್ಯವಿದಿಯ ನಿರಕ್ಷರಿಯು ಇಂತಹ ಮುಷ್ಟಿ ತುಂಬಾ ಪರಿಚ್ಛೇದ ಗಳನ್ನು ಹೊಂದಿರುತ್ತಾನೆ ಅವುಗಳಲ್ಲಿ ಇದೂ ಒಂದಾಗಿದೆ.[5] "ತೀರ್ಪು ಮಾಡಬೇಡಿರಿ; ನಿಮಗೂ ತೀರ್ಪಾಗದು" ವಿಶೇಷವಾಗಿ KJV ಪದಗುಚ್ಚಕ್ಕೆ ಅವು ಚಿರಪರಿಚಿತವಾಗಿಯೇ ಇವೆ.

ಯಾರು ನನ್ನ ಸ್ವಂತ ಅನುಭವದಲ್ಲಿ, "ತೀರ್ಪು ಮಾಡಬೇಡಿರಿ; ನಿಮಗೂ ತೀರ್ಪಾಗದು" ಎಂಬ ಮಾತನ್ನು ತಪ್ಪಿತಸ್ಥರ ಅಥವಾ ತಮ್ಮ ಮೇಲೆ ಅನುಕಂಪ ಬಯಸುವವರ ಬಾಯಲ್ಲಿ ಅನೇಕ ಸಾರಿ ನಾನು ಕೇಳಿದ್ದುಂಟು. ಈ ವ್ಯಕ್ತಿಗಳು ನಾವೆಂದಿಗೂ ಯಾರೊಬ್ಬರ ಜೊತೆಗೆ ತಪ್ಪಾಗಿದ್ದೇವೆ ಅಥವಾ ಉತ್ಕಟವಾದ ಸಂಗತಿಗಳು ಪಶ್ಚಾತ್ತಾಪ ಪಡೆದ ಮತ್ತು ತನ್ನ

ಮಾರ್ಗಗಳನ್ನು ಬದಲಾಯಿಸಿಕೊಳ್ಳದ ಪಾಪಿಯಂತೆ ನಿರೀಕ್ಷಿಸುವವರಾಗಿರುತ್ತಾರೆ ಎಂಬ ವ್ಯಾಖ್ಯಾನದ ಮಾತುಗಳ ಅರ್ಥವನ್ನು ಹೊಂದಿರುತ್ತಾರೆ.[6] ಯೇಸು ಬೋಧಿಸಲು ಬಯಸಿದ್ದು ಇದಾಗಿರಬಹುದೇ?

ಏನೂ ಅಲ್ಲದಕ್ಕಿಂತ ಮುಂಚೆ ಮತ್ತಾಯ 7:1ರಲ್ಲಿನ "ತೀರ್ಪು" ಎಂಬ ಪದವು ಅರ್ಥ *ಕೊಡುವಂತೆ,* ಅದು ಏನನ್ನೂ *ಅರ್ಥೈಸುವುದಿಲ್ಲ* ಎಂಬುದನ್ನು ನಾನು ಮೊದಲು ಒತ್ತಿ ಹೇಳುವವನಾಗಿದ್ದೇನೆ.

**ನಾಗರಿಕ ನ್ಯಾಯತೀರ್ಪಿಗೆ ವಿರುದ್ಧವಾಗಿಲ್ಲದಿರುವದು**

ಬೈಬಲ್ ತನ್ನನ್ನು ತಾನು ಯಾವುದೇ ವಿರೋಧಭಾಸಕ್ಕೆ ಹೋಗದಿರುವುದರಿಂದ, ನಾವು ದಿವಾನಿ (ಇದು ಲೌಕಿಕ ಕೋರ್ಟನಿಂದ ಕೊಡುವ ತೀರ್ಪು) ನ್ಯಾಯ ತೀರ್ಪಿನಿಂದ ದೂರವಿರಬೇಕೆಂದು ಯೇಸುವಿನ ಮಾತುಗಳು ಅರ್ಥಕೊಡುವುದಿಲ್ಲ. ದೇವರು ಸಿವಿಲ್ (ನಾಗರೀಕ) ಸರ್ಕಾರಕ್ಕೆ ತೀರ್ಪಿನ ಅಧಿಕಾರವನ್ನು ಕೊಟ್ಟಿದ್ದಾನೆ (ನೋಡಿರಿ 1 ಪೇತ್ರ 2:13, 14; ತೀತ 3:1; ರೋಮಾಪುರ 13:1).

**ಚರ್ಚಿನ ಶಿಸ್ತನ್ನುನಾಶಮಾಡುವವದಲ್ಲ**

"ಏನೇ *ಆಗಲಿ* ಈ ಪರಿಚ್ಛೇದು ನಾಗರೀಕ (ದಿವಾನಿ) ನ್ಯಾಯತೀರ್ಪಿನೊಡನೆ ಸಂಬಂಧಿಸಿದ್ದಲ್ಲ. ಇದು ಸಭೆಯನ್ನು ಅಥವಾ ಅದರ ಯಾವುದೇ ಸದಸ್ಯರಿಗೆ ಅವರು ತಪ್ಪಿದ್ದಾಗ ಮತ್ತು ಶಿಸ್ತಿನಿಂದ ಇರುವುದಕ್ಕಾಗಿ ಅವರಿಗೆ ತೀರ್ಪುಮಾಡಿದ್ದಕ್ಕಾಗಿ ಅದರ ಹಿರಿಯರನ್ನು ಖಂಡಿಸುವಂತದ್ದು" ಎಂದೂ ಕೆಲವರು ಪ್ರತಿಕ್ರಯಿಸಬಹುದು. ಈ ಭಾವನೆಯು ಕೇವಲ ಸಭೆಯ ಸದಸ್ಯರಲ್ಲದವರಿಗೆ ಮಾತ್ರವಲ್ಲ, ಆದರೆ ಸಭೆಯ ಕೆಲ ಸದಸ್ಯರಿಗೂ ಕೂಡಾ ಅನುಭವ ಆಗುವುದುಂಟು. ಇಂಥ ಒಂದು ಸಭೆಯ ಹಿರಿಯರೊಬ್ಬರು "ನಾನು ಹಿರಿಯನಾಗಿರುವ ಎಲ್ಲೆಡೆಯೂ ನಾವು ಎಂದಿಗೂ ಯಾರೊಬ್ಬನನ್ನು ಅನ್ಯೋನ್ಯತೆಯಿಂದ ತೆಗೆದುಹಾಕುವುದಿಲ್ಲ." ಅಷ್ಟೇ ಅಲ್ಲ ಯೇಸು "ತೀರ್ಪು ಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವುದಿಲ್ಲ" ಎಂದು ಹೇಳಿಲ್ಲವೇ ಎಂದು ನನಗೆ ಹೇಳಿದರು.

ಬೈಬಲ್, ತನ್ನೊಡನೆ ಯಾವುದೇ ವಿರೋಧಾಭಾಸವನ್ನು ಮಾಡಿಕೊಳ್ಳದು ಎಂದು ತಿರುಗಿ ನಾನು ಹೇಳುತ್ತೇನೆ. ಆದ್ದರಿಂದ ನಾವೆಂದಿಗೂ ಚರ್ಚಿನ ಶಿಸ್ತಿನ್ನು ಪಾಲಿಸಬಾರದು ಎಂದು ಮತ್ತಾಯ 7:1 ನಮಗೆ ಬೋಧಿಸುವುದಿಲ್ಲ. "ತೀರ್ಪು ಮಾಡಬೇಡಿರಿ" ಎಂದು ಹೇಳಿದ ಯೇಸು ಚರ್ಚಿನ ಶಿಸ್ತನ್ನು ಪಾಲಿಸಿರಿ ಎಂದೂ ಸಹ ನಮಗೆ ಕಲಿಸುವವನಾಗಿದ್ದಾನೆ (ಮತ್ತಾಯ 18:15-17). ಈ ಎಲ್ಲಾ ಸತ್ಯಗಳಿಗಾಗಿ ಅಪೊಸ್ತಲರಿಗೆ ಮಾರ್ಗದರ್ಶನ ಮಾಡಲು ಪವಿತ್ರಾತ್ಮನನ್ನು ಕಳಿಸಿದಾಗ (ಯೋಹಾನ 16:3), ಆತನು ಪೌಲ ಮತ್ತು ಇತರರಿಗೆ ಚರ್ಚಿನ ಶಿಸ್ತಿಗೆ ಅವಶ್ಯವಾದ ಬಲಯುತವಾದ ಪರಿಚ್ಛೇದಗಳನ್ನು ಪ್ರಕಟಿಸಲು ಪ್ರಭಾವ ಬೀರಿದನು (1 ಕೊರಿಂಥ 5:5, 9; 2 ಥೆಸಲೋನಿಕ 3:6, 14, 15; ತೀತ 3:9-11).

**ವೈಯಕ್ತಿಕ ತೀರ್ಪನ್ನು ಖಂಡಿಸುವದಕ್ಕಲ್ಲ**

ಇನ್ನೊಬ್ಬರು ಹೀಗೆ ಪ್ರತಿಕ್ರಯಿಸಬಹುದು. "ಈ ಪರಿಚ್ಛೇದವು ಬಹುಶಃ ಚರ್ಚಿನ ಶಿಸ್ತಿನ ಬಗೆಗೆ ಮಾತನಾಡುತ್ತಿರಬಹುದಲ್ಲವೇ, ಆದರೆ ಇದು ಕ್ರೈಸ್ತ ವ್ಯಕ್ತಿಯ ಬಗೆಗಾದರೂ ಅದು ಬೋಧಿಸುತ್ತಿರಬಹುದಲ್ಲವೆ, ಯಾರೊಬ್ಬರನ್ನೂ ಅವರು ನೈತಿಕವಾಗಿ ಅಥವಾ ತಾತ್ವಿಕವಾಗಿ ತಪ್ಪು ಎಂದು ಹೇಳುವ ಹಕ್ಕು ನಮಗೆ ಇಲ್ಲ."

ಬೈಬಲ್ ತನ್ನನ್ನು ತಾನು ಎಂದಿಗೂ ವಿರೋಧಾಭಾಸಕ್ಕೆ ಎಳೆದುಕೊಳ್ಳಲಾರದು ಎಂದು ಮತ್ತೊಂದು ಸಾರಿ ನಾನು ಹೇಳಬಯಸುತ್ತೇನೆ. ಇದು ನಿಜವಾಗಿ ಇದ್ದಾಗಲೂ,

ಮತ್ತಾಯ 7:1 ಇತರ ಜನರ ಬಗೆಗೆ ನಾವು ಎಂದಿಗೂ ತೀರ್ಪನ್ನು ಮಾಡಬಾರದು. ಮುಂದಿನ ಪ್ರಸಂಗದಲ್ಲಿ, "ದೇವರ ವಸ್ತುಗಳನ್ನು ನಾಯಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲ ಬೇಡಿರಿ ..." ಎನ್ನುವ ವಚನ 6ನ್ನು ನಾವು ಅಧ್ಯಯನ ಮಾಡುವಾ. ಯಾರು "ನಾಯಿಗಳು" ಮತ್ತು ಯಾರು "ಹಂದಿಗಳು" ಎಂದು ತೀರ್ಪುಮಾಡದೇ ನಾವು ಆಜ್ಞೆಗಳಿಗೆ ವಿಧೇಯರಾಗಲಾರೆವು. ಒಂದು ವೇಳೆ ಓದುವ ಕಾರ್ಯವು ಸಂಪೂರ್ಣಗೊಂಡಿದ್ದಾದರೆ, ಮತ್ತಾಯ 7:15-20 ಸುಳ್ಳು ಪ್ರವಾದಿಗಳ ಬಗೆಗೆ ಎಚ್ಚರಿಸುವುದಾಗಿದೆ ಮತ್ತು "ಅವರ ಫಲಗಳಿಂದಲೇ ಅವರನ್ನು ತಿಳುಕೊಳ್ಳುವಿರಿ" (ವಚನ 16) ಎಂದು ಸುಳ್ಳು ಪ್ರವಾದಿಗಳ "ಫಲವನ್ನು" ಅವರ ಕಾರ್ಯದಲ್ಲಿ ತಿಳಿಯಬೇಕು ಎಂದು ಹೇಳುತ್ತವೆ. ಬೋಧಕರು ಕೆಲಸಾರಿ "ನಾವು ನ್ಯಾಯ ತೀರ್ಮಾನ ಕರಲ್ಲ; ನಾವು ಕೇವಲ ಫಲಗಳ ಮೇಲ್ವಿಚಾರಕರು" ಎಂದು ಹೇಳುವುದುಂಟು. ಒಂದು ವೇಳೆ ಸ್ಥಳಾವಕಾಶ ಸಿಕ್ಕದ್ದಿದ್ದಾದರೆ, ಇತರರ ಬಗೆಗೆ ತೀರ್ಪುಮಾಡುವಂಥ ನಿರಂತರವಾದ ಅವಶ್ಯಕತೆಯನ್ನು ಸೂಚಿಸುವಂಥ ಅನೇಕ ಇತರ ಪರಿಚ್ಛೇದಗಳನ್ನು ನಾವು ನೋಡಬಹುದಾಗಿದೆ (ರೋಮಾಪುರ 16:17; ಗಲಾತ್ಯ 1:8, 9; ಪಿಲಿಪ್ಪಿ 3:2; 1 ಯೋಹಾನ 4:1).

## ಯೇಸು ಏನನ್ನು ಬಯಸುತ್ತಾನೆ (ವಚನ 1)

ನಮ್ಮ ವೇದಭಾಗದಲ್ಲಿ ಇರುವ "ತೀರ್ಪುಮಾಡು" ಎಂಬ ಪದವು ಏನನ್ನು ಒತ್ತಿ ಹೇಳುವದು ಎಂಬುದು ಯಾವ ಅರ್ಥವನ್ನು ಕೊಡುವುದಿಲ್ಲ, "ಇದು ಯಾವ ಅರ್ಥವನ್ನು ಕೊಡುವುದಾಗಿದೆ?" ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವುದು ನಮಗೆ ಇನ್ನೂ ಅವಶ್ಯವಿದೆ.

"ತೀರ್ಪುಮಾಡು" ಎಂಬ ಪದಕ್ಕೆ ಇರುವ ಗ್ರೀಕ್ ಭಾಷಾಂತರವು *krino* ಆಗಿದ್ದು ಇದಕ್ಕೆ ಇಂಗ್ಲೀಷ್ ಪದದಲ್ಲಿ ವಿಮರ್ಶಿಸಲು ಎಂದು ನಾವು ಅರ್ಥವನ್ನು ಪಡೆಯುವವರಾಗಿದ್ದೇವೆ. ನಾವು ಸಾಮಾನ್ಯವಾಗಿ ವಿಮರ್ಶಿಸು ಎಂಬ ಪದಕ್ಕೆ ನಿಷೇದ ರೂಪದ ಅರ್ಥದಲ್ಲಿ - ಇತರರಲ್ಲಿನ ನ್ಯೂನ್ಯತೆಯನ್ನು ಎತ್ತಿತೋರುವದು ಎಂದು ಯೋಚಿಸುವವರಾಗಿದ್ದೇವೆ. ಆದರೆ "ವಿಮರ್ಶಿಸು" ಎಂಬ ಪದದ ಅರ್ಥವು ಕೇವಲ "ಮೌಲ್ಯಮಾಪನ ಮಾಡುವದು" (ಯೋಹಾನ 7:24) ಎಂದಾಗಿದೆ. ಮತ್ತಾಯ 7:1ರಲ್ಲಿ, ಮೌಲ್ಯಮಾಪನವು ನಕಾರಾತ್ಮಕವಾಗಿರಬಹುದು ಅಥವಾ ಸಕಾರಾತ್ಮಕವಾಗಿರಬಹುದು, ಅದು ಕೆಟ್ಟದ್ದಾಗಿರಲೂ ಬಹುದು, ಅಥವಾ ಅದು ಕೆಟ್ಟದ್ದಾಗಿರದೆ ಇರಬಹುದು; ಅದು ವಿಧ್ವಂಸಕವಾಗಿರಬಹುದು ಅಥವಾ ಕಟ್ಟುವದು (ವಿಧಾಯಕವೂ) ಆಗಿರಬಹುದು. ಯೇಸು ತಾನೇ ಕೇಳುಗರ ಕಾಳಜಿ ತೋರುವಂಥ ತೀರ್ಪುಮಾಡುವದರ ವಿರುದ್ಧದ ಸಾರ್ವತ್ರಿಕವಾದ ಶಾಸನವು ಇದಲ್ಲ. ಕ್ಲಿಷ್ಟಮಯವಾದ ಶಾರೀರಕ ಸಾಮರ್ಥ್ಯವನ್ನು ದೇವರು ನಮ್ಮಲ್ಲಿ ಇರಿಸಿದ್ದು ನಮ್ಮಲ್ಲಿನ ಅನೇಕ ಲಕ್ಷಣಗಳಲ್ಲಿ ಒಂದಾಗಿದ್ದು ನಮ್ಮನ್ನು ಪ್ರಾಣಿಗಳಿಂದ ಬೇರೆಯಾಗಿರಿಸುವುದಾಗಿದೆ.[7] ನಾವು ಪುರಾವೆಗಳನ್ನು ತೂಗಲು ಸಮರ್ಥರಾಗಿದ್ದೇವೆ; ಮೌಲ್ಯಮಾಪನ ಮಾಡಲು ಸಮರ್ಥರಾಗಿದ್ದೇವೆ; ನಾವು ತೀರ್ಪು ಮಾಡಲು ಸಮರ್ಥರಾಗಿದ್ದೇವೆ.

ಅದಲ್ಲದೆ ಯೇಸುವಿನ ಮಾತುಗಳು ನಾವು ನಿರ್ಲಕ್ಷಿಸಬಹುದಾದ ಒಂದು ನಿಶ್ಚಿತರೂಪದ ತೀರ್ಪುಮಾಡುವಿಕೆಯು ಇದೆ ಎಂದು ಬೋಧಿಸುವುದಾಗಿದೆ. ನಾನು ಈ ವಿಷಯದಲ್ಲಿ ಬರಿದಾಗಿ ಹೋಗಿಲ್ಲ, ಆದರೆ ಯೇಸು ಖಂಡಿಸಿದ ಅನೇಕ ನ್ಯಾಯತೀರ್ಪುಗಳನ್ನು ನಾನು ಸೂಚಿಸುವವನಾಗಿದ್ದೇನೆ. (ನಮ್ಮ ಹೃದಯ ಮತ್ತು ಜೀವಿತಗಳಿಂದ ಹೊರಹಾಕಿದ ಇತ್ತೀಚೆಗೆ ಸೂಚಿಸಲ್ಪಟ್ಟ ಪೇಜಿಗೆ ಸಿಲುಕಿಸಿದಂತ ಅಂಶಗಳು ಇಲ್ಲಿವೆ.)

### ಪಕ್ಷಪಾತದ ನ್ಯಾಯತೀರ್ಪು

ನಮ್ಮ ನ್ಯಾಯ ತೀರ್ಪಿಗೆ ಬಣ್ಣ ಕಡಲು ಸಾಮಾನ್ಯವಾದ ನ್ಯೂನ್ಯತೆಗಳಾದ ನಮ್ಮ ಹಿನ್ನಲೆ,

ಪೂರ್ವಗ್ರಹ, ಆಯ್ಕೆ ಇವುಗಳ ಸೇರಿಕೊಂಡಿರುತ್ತವೆ. ಇವುಗಳಿಂದ ದೂರವಿರುವದು ಕಷ್ಟಸಾಧ್ಯವಾಗಿದೆ. ಪ್ರಾಚನ ಗ್ರೀಕರು ಕೆಲಸಾರಿ ಮಹತ್ವದ ಪ್ರಯೋಗ ಗಳನ್ನು ಕತ್ತಲೆಯಲ್ಲಿ ಮಾಡುತ್ತಿದ್ದರು ಇದರ ಮೂಲಕ ಅವುಗಳ ಪ್ರಭಾವವನ್ನು ಕೇವಲ ಅಂಶಗಳ ಮೂಲಕ ಪಡೆಯುತ್ತಿದ್ದರು ಎಂದು ನಾನು ಕೇಳಿದ್ದೇನು. ನ್ಯಾಯತೀರ್ಪಿನ ಒಂದು ಕಾರಣವೆಂದರೆ ಅವರು ಕೆಳತರದ ಸ್ವಪ್ರತಿಷ್ಟೆಯಿಂದ ಬಳಲುವವರಾಗಿರುತ್ತಾರೆ ಎಂದು ಮಾನಸಿಕ ತಜ್ಞರು ಹೇಳುತ್ತಾರೆ. ಒಬ್ಬನು ಕೀಳರಿಮೆಯನ್ನು[8] ಹೊಂದದ್ದಾದರೆ, ಆತನು ತನ್ನನ್ನು ತಾನು ಮೇಲಕ್ಕೆತ್ತಿಕೊಳ್ಳಲೂ ಅಸಧ್ಯ, ಅಥವಾ ಇತರರನ್ನು ಕೆಳಕ್ಕೆ ತಳ್ಳಲೂ ಆಗದು. ಆದರೆ ಕೆಲವರಿಗೆ ಇತರರನ್ನು ಕೆಳಕ್ಕೆ ತಳ್ಳುವದು ಸರಳವಾದದ್ದು ಆಗಿರುತ್ತದೆ.

**ಸಮರ್ಪಕ ಮಾಹಿತಿ ರಹಿತ ನ್ಯಾಯ ತೀರ್ಪು**

ಸತ್ಯಾರ್ಥಗಳನ್ನು ಹೊಂದದೆ ಅಥವಾ ಪರಿಸ್ಥಿತಿಯನ್ನು ಅರಿಯದೆ ತೀರ್ಪುಮಾಡಲು ನಾವು ಯಾವಾಗಲೂ ತ್ವರೆಪಡುವವರಾಗಿದ್ದೇವೆ. (ನಮ್ಮಲ್ಲಿ ಕೆಲವರು ಪರಿಸ್ಥಿತಿಯೆಂಬ ಅರ್ಧ ಡಝನ್ ಇಟ್ಟಿಕೆಯನ್ನು ತೆಗೆದುಕೊಳ್ಳುತ್ತೇವೆ ಮತ್ತು ದೂಷಣೆಯೆಂಬ ಸಂಪೂರ್ಣವಾದ ಮನೆಯನ್ನು ಕಟ್ಟುತ್ತೇವೆ.) ನಿಜವಾಗಿ ಸಂಬವಿಸಿದ್ದರ ಬಗೆಗೆ ಸಂಪೂರ್ಣವಾದ ಮಾಹಿತಿಯನ್ನು ನಾವು ಹೊಂದಿರುವುದಿಲ್ಲ. ಅದರ ಹಿನ್ನಲೆಯನ್ನು ಅಥವಾ ಆರೋಪದ ಪ್ರೇರಣೆಯನ್ನು ನಾವು ಅರಿತುಕೊಳ್ಳುವುದಿಲ್ಲ. ಇದು ಆತನ ಜೀವಿತದ ನಿಯಮವೋ ಅಥವಾ ಅಪವಾದವೋ ಎಂಬುದು ನಮಗೆ ತಿಳಿದಿಲ್ಲ. ಯೇಸು ಜನಸಮೂಹಕ್ಕೆ "ನ್ಯಾಯವಾದ ತೀರ್ಪು ಮಾಡಿರಿ" ಎಂದು ಹೇಳುವುದಕ್ಕಿಂತ ಮೊದಲು "ಕಣ್ಣಿಗೆ ತೋರಿದ್ದರ ಮೇಲೆ ತೀರ್ಪು ಮಾಡಬೇಡಿರಿ" ಎಂದು ಹೇಳುತ್ತಾನೆ (ಯೋಹಾನ 7:24).

**ಅಸಾಧ್ಯವಾದ ನ್ಯಾಯತೀರ್ಪು**

ನಾವು ಒಬ್ಬರಿಗೆ ತೀರ್ಪುಮಾಡುವಾಗ ಹಲವು ಬಾರಿ ಆತನ ಉದ್ದೇಶಗಳಿಗೆ ಸಂಬಂಧಿಸಿದಂತ ತೀರ್ಪುಗಳನ್ನು ಮಾಡಲು ಸಹ ಪ್ರಯತ್ನಿಸುವವರಾಗಿರುತ್ತೇವೆ. ನಾವು ಯೇಸು ಅಲ್ಲದ್ದರಿಂದ "ಮನುಷ್ಯನ ಆಂತರ್ಯವನ್ನು ತಿಳಿದವನು" ಯಾರು? (ಯೋಹಾನ 2:25), ಇನ್ನೊಬ್ಬರ ಉದ್ದೇಶಗಳ ಬಗೆಗೆ ಖಚಿತವಾಗಿರುವುದಕ್ಕಾಗಿ ಇಲ್ಲಿ ಇನ್ನೊಂದು ಮಾರ್ಗವಿಲ್ಲ. "ಆತನು ಇದನ್ನು ಅಥವಾ ಅದನ್ನು ಮಾಡಿದನು ಎಂದು ಹೇಳಬಹುದು" ಆದರೆ "ಆತನು ಇದನ್ನು ಅಥವಾ ಅದನ್ನು ... ಈ ಕಾರಣಕ್ಕಾಗಿ ಮಾಡಿದನು" ಎಂದು ನಿಶ್ಚಿತವಾಗಿ ನಾವು ಹೇಳಲಾರೆವು. "ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ (ತಿಳುವಳಿಕೆ ಮತ್ತು ಅರಿತುಕೊಳ್ಳುವಿಕೆ) ಜೀವಾತ್ಮಕ್ಕೆ ಹೊತು ಮತ್ತಾರಿಗೆ ತಿಳಿಯುವದು?" ಎಂದು ಪೌಲನು ಹೇಳುತ್ತಾನೆ (1 ಕೊರಿಂಥ 2:11ಎ). ಅದಲ್ಲದೆ "ಅವಳು ತನ್ನನ್ನು ಬಹಳ ಶ್ರೇಷ್ಟಳೆಂದು ತಿಳಿದಿದ್ದಾಳೆ!"; "ಆತನು ತಾನು ಏನೋ ಆಗಿದ್ದಾನೆ ಎಂದು ತಿಳಿದಿದ್ದಾನೆ"[9] ಎಂಬ ತರದ ಪದಗಳು ಕೇಳಿ ಬರುತ್ತವೆ. ಇತರರ ಉದ್ದೇಶದ ಬಗೆಗೆ ಎಷ್ಟು ಸರಳವಾಗಿ ತೀರ್ಪುಮಾಡುಬಿಡುತ್ತೇವಲ್ಲ!

**ಕರುಣೆಯಿಲ್ಲದ ನ್ಯಾಯತೀರ್ಪು**

ಜನರು ಯೋಗ್ಯವಾದದ್ದನ್ನು ಮಾಡುವ ಬದಲಿಗೆ ಅಯೋಗ್ಯವಾದ ಸಾಧ್ಯತೆಯನ್ನು ಬೆಳೆಸುವುದನ್ನು ಯೇಸು ಖಂಡಿಸುವವನಾಗಿದ್ದಾನೆ. ಮೊಫೆಟ್ಟರ ಭಾಷಾಂತರಾದ 1 ಕೊರಿಂಥ 13:7ಬಿ ಹೇಳುವುದೇನೆಂದರೆ ಪ್ರೀತಿಯು "ಯಾವಾಗಲೂ ಶ್ರೇಷ್ಟವಾದದ್ದನ್ನು ನಂಬಲು ಆತುರವುಳ್ಳದ್ದಾಗಿರುತ್ತದೆ."[10]

ಒಬ್ಬ ವ್ಯಕ್ತಿಯು ಏನು ಮಾಡುತ್ತಾನೆ ಎಂಬುದರ ಮೇಲೆ ನಾವು ಆತನನ್ನು

ತಿಳಿದವರಾಗಿರುತ್ತೇವೆ ಎಂಬುದು ನಿಜವಾದದ್ದಾಗಿರುತ್ತದೆ, ಆದರೆ ಹಲವು ಬಾರಿ ಆತನ ಕೃತ್ಯಗಳು ಕಡೇಪಕ್ಷ ಎರಡು ವಿಭಿನ್ನವಾದ ವ್ಯಾಖ್ಯಾನವನ್ನು ಹೊಂದಿರುತ್ತವೆ: ಒಂದು ಒಳ್ಳೆಯದು ಮತ್ತು ಎರಡು ಕೆಟ್ಟದ್ದು. ಈ ರೀತಿಯ ಸಂಗತಿಯಿದ್ದಾಗ, ಸಾಮಾನ್ಯವಾಗಿ ಆ ವ್ಯಕ್ತಿಯು ಏನನ್ನು ಮಾಡಿದ್ದಾನೆ ಎಂಬುದನ್ನು ವ್ಯಾಖ್ಯಾನಿಸುವಂಥದ್ದಾಗಿದೆ.

**ತೀಕ್ಷ್ಣವಾದ ನ್ಯಾಯತೀರ್ಪು**

ನಮ್ಮ ನ್ಯಾಯತೀರ್ಪನ್ನು ಕರುಣೆ ಮತ್ತು ಪ್ರೀತಿಯಿಂದ ಹದಗೊಳಿಸಬೇಕಾದಾಗ ನ್ಯಾಯತೀರ್ಪಿನ ನಕಾರಾತ್ಮಕವಾದ ವಿಚಾರ ಸರಣಿಯ ಫಲಿತಾಂಶವು ಕೇವಲ ಎಣಿಕೆ ಮಾಡುವಂತದ್ದಾಗಿದೆ, ನಾವು ಕೆಲವುಬಾರಿ ನಮ್ಮ ನ್ಯಾಯ ತೀರ್ಪಿನಲ್ಲಿ ತೀಕ್ಷ್ಣವಾಗಿಯೂ ಕಹಿಯಾಗಿಯೂ, ಮತ್ತು ಕಪಟವುಳ್ಳವರೂ ಆಗಿರುತ್ತೇವೆ. "ಮೊಟ್ಟ ಮೊದಲು ನಿಮ್ಮ ನಿಮ್ಮೊಳಗೆ ಯಥಾರ್ಥವಾದ ಪ್ರೀತಿಯಿರಲಿ; ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ" (1 ಪೇತ್ರ 4:8) ಎಂದು ಪೇತ್ರನು ಹೇಳುತ್ತಾನೆ.[11]

ಎಲ್ಲರೊಡನೆ ಹೊಂದಿಕೊಳ್ಳುವದು ಹೆಚ್ಚಾಗಿ ಆತ್ಮದ ವಿಷಯವಾಗಿದೆ. ಒಂದೆಡೆ ನಂಬುವ ಮತ್ತು ಮೇಲೆತ್ತಲು ಪ್ರಯತ್ನಿಸುವ ಮತ್ತು ಸಹಾಯಿಸುವ ಪ್ರೀತಿಯ ಕರುಣೆಯುಳ್ಳ ಆತ್ಮವು ಇದೆ. "ಅದಕ್ಕೆ ಆತನು ಯೋಗ್ಯನು" ಎಂಬ ತೀಕ್ಷಣವಾದ, ಕರುಣೆಯಿಲ್ಲದೆ, ನ್ಯಾಯತೀರ್ಪಿನ ಆತ್ಮವು ಇನ್ನೊಂದೆಡೆ ಇರುವುದಾಗಿದೆ.

## ಯೇಸು ವಾಗ್ದಾನಮಾಡಿದ್ದೇನೆ (ವಚನಗಳು 1ಬಿ, 2)

ಇದೆಲ್ಲವನ್ನು ಮನದಲ್ಲಿ ಇಟ್ಟುಕೊಂಡು, ವಚನ 1 ಮತ್ತು 2 ರ ಕೊನೆಯಲ್ಲಿ ನಮ್ಮ ಉಳಿದ ವೇದಭಾಗದಲ್ಲಿ ನಾವು ಚರ್ಚಿಸುವಾ.

**ಕರುಣೆಯ ಅವಶ್ಯಕತೆ**

"ತೀರ್ಪು ಮಾಡಬೇಡಿರಿ" (ವಚನ 1) ಎಂದು ಹೇಳಿದ ನಂತರ ಯೇಸು "ನಿಮಗೂ ತೀರ್ಪಾಗದು" (ವಚನ 1) ಎಂದು ಹೇಳಿದನು. ನಂತರ ಅದನ್ನು ಆತನು ವಚನ 2ರಲ್ಲಿ ವಿವರಿಸುತ್ತಾ: "ನೀವು ಮಾಡಿದ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು" ಎಂದು ಹೇಳುತ್ತಾನೆ. ಇನ್ನೂ ಕೆಲ ಸಂಗತಿಗಳಲ್ಲಿ, ಈ ತತ್ವವು ಈ ಪ್ರಸ್ತುತ ಜಗತ್ತಿನಲ್ಲಿ ನಿಜವಾದದ್ದು ಆಗಿದೆ. ಜೀವನವು ಒಂದು ಕನ್ನಡಿಯಾಗಿದ್ದು, ನಾವು ಸಾಮಾನ್ಯವಾಗಿ ಇತರರನ್ನು ನೋಡಿಕೊಂಡ ಹಾಗೆಯೇ ನಾವು ಕೂಡಾ ನೋಡಿಕೊಳ್ಳಲ್ಪಡುತ್ತೇವೆ. ಲೂಕ ವಿವರಣೆಯ ಪ್ರಸಂಗದ ಈ ಭಾಗದಲ್ಲಿ ಇದು ಒತ್ತಿ ಹೇಳಲ್ಪಟ್ಟಿರಬಹುದು:

> ಇದಲ್ಲದೆ ತೀರ್ಪುಮಾಡಬೇಡಿರಿ; ಆಗ ನಿಮಗೂ ತೀರ್ಪಾಗುವದಿಲ್ಲ; ಅಪರಾಧಿಯೆಂದು ನಿರ್ಣಯಿಸಬೇಡಿರಿ, ಆಗ ನಿಮ್ಮನ್ನೂ ಅಪರಾಧಿಯೆಂದು ನಿರ್ಣಯಿಸುವುದಿಲ್ಲ; ಬಿಡಿಸಿರಿ, ಆಗ ನಿಮ್ಮನ್ನೂ ಬಿಡಿಸುವರು ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ಸೆರಗಿಗೆ ಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು[12] (ಲೂಕ 6:37, 38).

Living Bibleದ ಲೂಕ 37ರ ಸಾರಾಂಸದಲ್ಲಿ "ಇತರರೊಡನೆ ಸಮಾಧಾನದಿಂದ ಸಾಗಿರಿ; ನಂತರ ಅವರು ನಿಮಗೆ ಹಾಗೆಯೇ ಮಾಡುವರು" ಎಂದಿದೆ.

ಈ ಸಂದರ್ಭದಲ್ಲಿ, ಹೇಗೋ ಯೇಸು ವಿಶೇಷವಾಗಿ ದೇವರ ನ್ಯಾಯತೀರ್ಪಿನ್ನು ಇಲ್ಲಿ ಸೂಚಿಸುತ್ತಿದ್ದಾನೆ. ವಿಶ್ವದ ಬಟ್ಟೆಯೊಂದಿಗೆ ಹೆಣೆದುಕೊಳ್ಳುವ ತತ್ವವೆಂದರೆ, ಈಗಲೇ ಆಗಲಿ ಅಥವಾ ನಂತರದಲ್ಲಾಗಲಿ, ಏನನ್ನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು (ಗಲಾತ್ಯ 6:7).

ಹಾಮಾನನು ತಾನು ಮೋರ್ದಕೈಗೆ ಸಿದ್ಧಪಡಿಸಿದ ಗಲ್ಲು ಕಂಬಕ್ಕೆ ತಾನೇ ಏರಿಸಲ್ಪಟ್ಟನು (ಎಸ್ತೇರ 7). ಪ್ರಸಂಗಿ 10:8ಎ ಹೇಳುವದೇನೆಂದರೆ "ಗುಂಡಿಯನ್ನು ತೋಡುವವನು ತಾನೇ ಅದರಲ್ಲಿ ಬೀಳುವನು." ಮತ್ತಾಯ 7:1, 2 ವಿಶೇಷವಾಗಿ ದೇವರ ನಿತ್ಯ ನ್ಯಾಯತೀರ್ಪಿಗೆ ಹೊಂದಿಕೆಯಾಗುವುದಾಗಿದೆ (ನೋಡಿರಿ 7:21-27). ಒಂದು ದಿನ ನಮ್ಮಲ್ಲಿ ಪ್ರತಿಯೊಬ್ಬರೂ "ಕರ್ತನ ಮುಂದೆ ನಿಂತು ಕೊಳ್ಳಬೇಕು ಮತ್ತು ದೇವರ ಮುಂದೆ ಉತ್ತರಕೊಡಬೇಕು" (ರೋಮಾಪುರ 14:12). ಕೊನೆಯಲ್ಲಿ, ಅದಕ್ಕೆ ಸಂಬಂಧಿತವಾದ ನ್ಯಾಯತೀರ್ಪು ಇದಾಗಿದೆ.

ಆ ಶ್ರೇಷ್ಟವಾದ ಬಿಳಿ ಸಿಂಹಾಸನದ ಮುಂದೆ ನೀವಿರುವಂತೆ (ಪ್ರಕಟಣೆ 20:11), ನೀವು ಇತರರನ್ನು ತೀರ್ಪುಮಾಡಿದಂತೆ ನಿಮಗೆ ತೀರ್ಪಾಗುತ್ತಾ ಇರುವುದನ್ನು, ನೀವು ಅಳೆದ ಅಳತೆಯಲ್ಲಿಯೇ ನಿಮಗೂ ಅಳೆಯುವುದನ್ನು ಊಹಿಸಿಕೊಳ್ಳಿ. ಇದೇ ರೀತಿಯಲ್ಲಿ ನಿಮಗೆ ತೀರ್ಪಾಗಿದ್ದಾದರೆ ನೀವು ಎಡಕ್ಕೋ ಅಥವಾ ಬಲಕ್ಕೆ ಹೋಗಬಲ್ಲಿರಾ (ಮತ್ತಾಯ 25:31-33)? "ಕರುಣೆ ತೋರಿಸದೆ ಇರುವವನಿಗೆ ನ್ಯಾಯತೀರ್ಮಾನದಲ್ಲಿ ಕರುಣೆ ತೋರಿ ಸಲ್ಪಡುವುದಿಲ್ಲ" ಎಂಬ ಯಾಕೋಬ ಪತ್ರಿಕೆಯಲ್ಲಿನ ಶೀಥಲಗೊಳಿಸುವ ಈ ಮಾತುಗಳನ್ನು ಪರಿಗಣಿಸಿರಿ (ಯಾಕೋಬ 2:13).

**ಸಾಮಾನ್ಯ ಪರಿಜ್ಞಾನದ ಅವಶ್ಯಕತೆ**

ಮತ್ತಾಯ 7:1-12ರಲ್ಲಿ ಕಂಡುಬರುವ ಎಚ್ಚರಿಕೆಗಳಿಗೆ ಸ್ವಲ್ಪ ಸಾಮಾನ್ಯ ಪರಿಜ್ಞಾನವು ಉಪಯೋಗಿಸಲ್ಪಡಲೇಬೇಕು ಎಂದು ನಾನು ಒತ್ತುಕೊಟ್ಟು ಹೇಳುತ್ತೇನೆ. ನಾವು ತೀರ್ಪಿನಲ್ಲಿ ಇರುವುದಾದರೆ ವಚನ 1 ಮತ್ತು 2 ದಿವ್ಯ ನ್ಯಾಯತೀರ್ಪಿಗಾಗಿ ಮಾತ್ರ ಇರುವ ಸಂಗತಿ ಎಂದು ಯೇಸು ಹೇಳಿಲ್ಲ. ಪ್ರತಿಯೊಬ್ಬನು ತಾನು ಹೇಗೆ ಜೀವಿಸುತ್ತಾನೋ ಅದರಲ್ಲಿ ಒಳ್ಳೆಯ ನಿಶ್ಚಂತತೆಯನ್ನು ಹೊಂದಿರುತ್ತಾನೆ ಎಂದು ನಾವು ಯೋಚಿಸುತ್ತಾ, ನಾವು ಆತ್ಮೀಕವಾಗಿ ಜೀವಿ ಸುವವರು ಎಂದು ದೇವರೂ ಸಹ ಹೇಳುತ್ತಾನೆ ಎಂದು ಆತನು ಬೋಧಿಸುತ್ತಿಲ್ಲ. ಒಂದು ವೇಳೆ ನಾವು ಕೇವಲ ಪರ್ವತ ಪ್ರಸಂಗವನ್ನು ಹೊಂದಿದ್ದಾದರೆ, ಅಂಥ ವಿವರಣೆಗಳನ್ನು 7:1, 2 ಅಸತ್ಯವಾಗಿರುವದು ಎಂದು ನಾವು ಗುರುತಿಸಬಹುದಾಗದೆ: ಪ್ರಸಂಗದ ಕೊನೆಯಲ್ಲಿ, ಯಾವನು ಆತನ ಮಾತುಗಳನ್ನು ಕೇಳುತ್ತಾನೋ ಮತ್ತು ಅದನ್ನು ಮಾಡುತ್ತಾನೋ (ಯಾವುದನ್ನೂ ಬಿಟ್ಟುಬಿಡದೆ) ಆತನು ಬಂಡೆಯ ಮೇಲೆ ಕಟ್ಟಿದ ಮನುಷ್ಯನಂತಿರುವನು ಎಂದು ಯೇಸು ಹೇಳುತ್ತಾನೆ (7:24, 25).

**ನಮ್ರತೆಯ ಅವಶ್ಯಕತೆ**

ಅಧ್ಯಾಯ 7ರ, ಮೊದಲ ವಚನದಲ್ಲಿ ನಾವು ನಿರಂತರವಾಗಿ ತೀರ್ಪನ್ನು ಮಾಡುತ್ತಾ ಇರುವಾಗಲೂ ಸಹ ಇತರರಿಗೆ ಸಹಾಯಿಸುತ್ತಾ ನಮ್ಮನ್ನು ರಕ್ಷಿಸಿಕೊಳ್ಳುತ್ತಾ ಇದ್ದರೆ ನಾವು ದೇವರಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು ಎಂದು ಯೇಸು ಒತ್ತಿ ಹೇಳುತ್ತಾನೆ. ಪೌಲನು ಇದೇ ಸತ್ಯವನ್ನು ಒತ್ತಿಹೇಳುವವನಾಗಿದ್ದಾನೆ:

> ಮತ್ತೊಬ್ಬನ ಸೇವಕ ವಿಷಯದಲ್ಲಿ ತೀರ್ಪು ಮಾಡುವದಕ್ಕೆ ನೀನು ಯಾರು "... ದೋಷಿ ಯಾಗಿದ್ದರೂ ಅದು ಅವನ ಯಜಮಾನನಿಗೆ ಸೇರಿದ್ದು" (ರೋಮಾಪುರ 14:4).
>
> ನನಗಾದರೋ ... ನ್ಯಾಯ ಸಭೆಯಿಂದಾಗಲಿ ವಿಚಾರಣೆಯಾಗುವದು ಅತ್ಯಲ್ಪ ಕಾರ್ಯವಾಗಿದೆ; ನಾನೂ ನನ್ನನ್ನು ವಿಚಾರಿಸಿಕೊಳ್ಳುವುದಿಲ್ಲ ನನ್ನಲ್ಲಿ ದೋಷ ವಿದೆಯೆಂದು ನನ್ನ ಬುದಿಗೆ ತೊರುವುದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವುದಿಲ್ಲ; ನನ್ನನ್ನು ವಿಚಾರಣೆ ಮಾಡುವವನು ಕರ್ತನೆ,

ಆದುದರಿಂದ ಕಾಲಕ್ಕೆ ಮೊದಲು ಯಾವುದನ್ನು ಕುರಿತು ತೀರ್ಪು ಮಾಡಬೇಡಿರಿ; ಕರ್ತನು ಬರುವತನಕ ತಡೆಯಿರಿ. ಆತನು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು, ಹೃದಯದ ಆಲೋಚನೆಗಳನ್ನು ಪ್ರತ್ಯಕ್ಷಪಡಿಸುವನು; ಆ ಕಾಲದಲ್ಲಿ ಪ್ರತಿಯೊಬ್ಬನನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು (1 ಕೊರಿಂಥ 4:3-5).

ಜಾನ್ ಸ್ಕಾಟ್ ಹೇಳುವಂತೆ ಜನರಿಗೆ (ಪ್ರಾಣಿಗಳಿಂದ ನಮ್ಮನ್ನು ಬೇರ್ಪಡಿಸಲು ಸಹಾಯವಾದ ನಮ್ಮ ಶ್ರೇಷ್ಟವಾದ ವಿಮರ್ಷಾತ್ಮಕ ಶಕ್ತಿ ಉಪಯೋಗಿಸುವುದನ್ನು) ಮುಕ್ತಾಯಗೊಳಿಸುವವನಾಗಿರು ಎಂದು ಎಂದಿಗೂ ಯೇಸು ಹೇಳಿಲ್ಲ ಆದರೆ ದೇವರಾಗಲು (ನಮ್ಮನ್ನು ನಾವು ನ್ಯಾಯಾಧೀಶರಂತೆ ಕುಳಿತುಕೊಳ್ಳ) ಹೊರಟ ದುರಹಂಕಾರದ ಮಹತ್ವಾಕಾಂಕ್ಷೆಯ ಬಗೆಗೆ ಹೇಳುತ್ತಾನೆ.[13]

ನಾವು ದೇವರಾಗದೇ ಇರುವುದರಿಂದ, ನಮ್ಮ ತೀರ್ಪು ಸಹಜವಾಗಿ ದೋಷ ಯುಕ್ತವಾಗಿರುತ್ತದೆ. ಇತರರೊಡನೆ ನಮ್ಮ ಸಂಬಂಧದಲ್ಲಿ ಏನೇ ಆಗಲಿ ನಾವು ಮತ್ತು ಅವರು ದೇವರ ಮುಂದೆ ನಿಂತುಕೊಳ್ಳಬೇಕು ಮತ್ತು ಅಂತಿಮ ತೀರ್ಪನ್ನು ಮಾಡುವವನು ದೇವರೇ ಎಂದು ನಾವು ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ನಾವು ಇತರ ರೊಡನೆ ವ್ಯವರಿಸುವಾಗ ದಯಾಳುವೂ, ಅಂತ ಕರುಣೆಯುಳ್ಳವರೂ, ಸಹನೆಯಳ್ಳವರೂ ಆಗಿರಬೇಕು!

## ಮುಕ್ತಾಯ

ನಾವು ಜನರೊಡನೆ ಹೊಂದಿಕೊಳ್ಳಬೇಕಾದರೆ ನಾವು ತೀರ್ಪುಮಾಡುತ್ತಾ ಇರುವುದನ್ನು ನಿಲ್ಲಿಸಬೇಕು ಎಂಬುದನ್ನು ನಾವು ಮತ್ತಾಯ 7:1-12ರಿಂದ ಮೊದಲು ಕಲಿತುಕೊಳ್ಳಬೇಕೆಂದು ಯೇಸು ಹೇಳುತ್ತಾನೆ. ನಮ್ಮ ಮುಂದಿನ ಪ್ರಸಂಗದಲ್ಲಿ ನಮ್ಮ ವೇದಭಾಗದಿಂದ ಇದಕ್ಕೆ ಆಧಾರವಾದ ಐದು ಸಲಹೆಗಳನ್ನು ತೆಗೆದುಕೊಳ್ಳುವಾ ಒಂದು ವೇಳೆ ನಾವು ಇತರರೊಡನೆ ಹೊಂದಿಕೊಳ್ಳದಿದ್ದರೆ ...

- ನಮ್ಮ ಜೀವಿತದಲ್ಲಿ ಅವಶ್ಯವಾದ ಬದಲಾವಣೆಗಳನ್ನು ನಾವು ಮೊದಲು ಮಾಡ ಬೇಕು (ವಚನಗಳು 3-5).
- ನಾವು ಇತರರಿಗೆ ನಮ್ರತೆಯಿಂದ ಮತ್ತು ಸೂಕ್ಷತೆಯಿಂದ ಸಹಾಯಿಸಬೇಕು (ವಚನ 5).
- ಭಿನ್ನಾಭಿಪ್ರಾಯದ ಮತ್ತು ಸಂಕಷ್ಟದ ಜೊತೆ ಹೇಗೆ ವ್ಯವಹರಿಸಬೇಕು ಎಂಬುದನ್ನು ನಾವು ಕಲಿಲೇಬೇಕು (ವಚನ 6).
- ದೇವರ ಮೇಲೆ ಆತುಕೊಳ್ಳುವುದನ್ನು ನಾವು ಪರಿಗಣಿಸಲೇಬೇಕು (ವಚನಗಳು 7-11).
- ನಾವು ಬಂಗಾರದ ನಿಯಮದಿಂದ ಜೀವಿಸಲೇಬೇಕು (ವಚನ 12).

ನಾವು ಈ ಸಮಯದಲ್ಲಿ ಕರ್ತನ ಆಮಂತ್ರಣವನ್ನು ಕೊಡಬಯಸುತ್ತೇವೆ. ನಂಬಿಕೊಂಡು ದೀಕ್ಷಾಸ್ನಾನಮಾಡಿಸಿಕೊಂಡವರಿಗಾಗಿ ರಕ್ಷಣೆಯು ಇದೆ ಎಂದು ಯೇಸು ಹೇಳಿದ್ದಾನೆ (ಮತ್ತಾಯ 16:16). ಜೀವ ಕೀರಿಟವನ್ನು ಹೊಂದಿದವರು ಮರಣಿಸುವವರ ಿಗೂ ನಂಬಿಗಸ್ತರಾಗಿರುತ್ತಾರೆ ಎಂದು ಆತನು ಹೇಳುತ್ತಾನೆ (ಪ್ರಕಟನೆ 2:10). ಪಾಪಿಯಾದ ಕ್ರೈಸ್ತನು ಪಶ್ಚಾತ್ತಾಪಪಟ್ಟು ಪ್ರಾರ್ಥಿಸಿದ್ದೇ ಅದಲ್ಲಿ ಆತನು ಕ್ಷಮಿಸಲ್ಪಡುವನು ಎಂದು ಆತನ ಅಪೊಸ್ತಲರ ಮೂಲಕ ಹೇಳಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 8:22). ಇವುಗಳು ಡೇವಿಡ್

ರೋಪರ್ ಅವರ ನ್ಯಾಯತೀರ್ಪಲ್ಲ; ದೇವರ ವಾಕ್ಯದ ಸರಳ ಬೋಧನೆಗಳು ಆಗಿವೆ. ಈ ಸತ್ಯಗಳ ನಿಮ್ಮ ಸ್ವೀಕೃತಿ - ತ್ಯಜಿಸುವಿಕೆಗಳು ನೀವು ನಿತ್ಯತ್ವವನ್ನು ರೂಪಿಸುವವು ಆಗಿವೆ (ಮತ್ತಾಯ 7:21-27). ಕ್ರಿಸ್ತನಾಗುವ ಅವಶ್ಯಕತೆಯು ನೀನಾಗಿರುವುದಾಗಿದ್ದರೆ ಅಥವಾ ನಿನ್ನ ಕ್ರಿಸ್ತೀಯ ನಂಬಿಕೆಯನ್ನು ಪುನಃ ತುಂಬಿಸಬಯಸಿದ್ದಾದಲ್ಲಿ ದಯವಿಟ್ಟು *ಈಗಲೇ* ಹಾಗೆಯೇ ಮಾಡು.[14]

---

ಟಿಪ್ಪಣಿಗಳು

[1]ಇದು ಮತ್ತು ಮುಂದಿನ ಪ್ರಸಂಗಗಳು ಅನೇಕ ವರ್ಷಗಳ ಹಿಂದೆಯೇ ರೂಪಿತವಾದವುಗಳು ಆಗಿವೆ. ನನ್ನ ಈ ಮೂಲಗಳನ್ನುಈಗ ಮಾಡಿದ ಹಾಗೆ ಅವುಗಳನ್ನು ಜಾಗರೂಕವಾಗಿ ದಾಖಲು ಮಾಡಿರಲಿಲ್ಲ. ಎಲ್ಲೆಲ್ಲಿ ಅದನ್ನು ಸ್ಮರಿಸಬೇಕಾಗಿತ್ತೀ ಅಲ್ಲೆಲ್ಲಾ ಮಾಡಲಿಕ್ಕಾಗಿಲ್ಲ. ಹಾಗೆ ಮಾಡಲು ವಿಫಲ ವಾದ ಯಾವುದೇ ಸಂದರ್ಭಗಳಿಗೂ ನಾನು ಕ್ಷಮೆಕೇಳುವವನಾಗಿದ್ದೇನೆ. [2]ಈ ಪದವು KJVಯಿಂದ ಬಂದದ್ದಾಗಿದೆ. ಇದರ ಪಾರಿಭಾಷಿಕವು ಜನರಿಗೆ ಹೆಚ್ಚು ಚಿರಪರಿಚಿತವಾದುದರಿಂದ ಇದು ಬಳಸಲ್ಪಟ್ಟದ್ದು ಇದನ್ನು ನಾವು ಈ ಪ್ರಸಂಗದ ಸರಣಿಯಲ್ಲಿ ನೋಡುವವರಾಗಿದ್ದೇವೆ. [3]Charles B. William, *The New Testament: A Translation in the Language of the People* (Chicago: Moody Press, 1949), 23. [4]ಕುರಡರಿಗೆ ಕುರುಡನ ನಾಯಕತ್ವದ ಉದಾಹರಣೆಯು ಬೋಧಕರಿಗಾಗಿ ಇರುವ ಪರ್ವತ ಪ್ರಸಂಗದ ಲೂಕನ ವಿವರಣೆಯು ಒಳಗೊಂಡಿದ್ದು (ಲೂಕ 6:39, 40), ಇದು ನಿಶ್ಚಿತ ವಾಗಿಯೂ ಫರಿಸಾಯ ಮತ್ತು ಶಾಸ್ತ್ರಿಗಳಿಗೆ ಸೂಚಿಸಲ್ಪಟ್ಟದ್ದಾಗಿದೆ (ನೋಡಿರಿ ಮತ್ತಾಯ 15:12-14). [5]ಇದು ಅಮೇರಿಕದಲ್ಲಿ ನಿಜವಾಗಿದ್ದಾಗಿದೆ. ಅವಶ್ಯವಿದ್ದಲ್ಲಿ ನೀವಿರುವೆಡೆ ಈ ಹೇಳಿಕೆಯ ಪದಸಮುಚ್ಚಯವನ್ನು ಬದಲಾಯಿಸಿಕೊಳ್ಳಿರಿ. [6]ಒಬ್ಬ ವ್ಯಕ್ತಿಯು ದೋಷಿಯಾಗಿದ್ದಾನೆ ಎಂದು ಹೇಳು ವುದಕ್ಕಿಂತ ಒಬ್ಬರು ದೋಷಿ ಎಂದು ಹೇಳುವು ಸ್ವಖಂಡನೆ ಎನ್ನಿಸಿಕೊಳ್ಳುವದು. ಯೋಚಿಸಿ. [7]ಪ್ರಾಣಿಗಳಿಂದ ಮಾನವ ಜೀವಿಯನ್ನು ಬೇರೆಮಾಡುವ ನಮ್ಮೆಲ್ಲರಲ್ಲಿರುವ ಮಹತ್ವದ ಗುಣಲಕ್ಷಣವು ನಮ್ಮಲ್ಲಿರುವದಕ್ಕಾಗಿ ನಮ್ಮನ್ನು ದೇವರ ಸ್ವರೂಪದಲ್ಲಿ ಮಾಡಿದ್ದು ಮತ್ತು ಮರಣವಿಲ್ಲದ ಆತ್ಮವನ್ನು ಇಟ್ಟಿದ್ದೇ ಆಗಿದೆ. [8]ಈ ನಿಲುವು ಕೆಲಸಾರಿ "ಶೀಳರಿಮೆ" ಎಂದು ಕರೆಯಲ್ಪಡುತ್ತದೆ. [9]ನಿಮ್ಮ ಕೇಳುಗರಿಗೆ ಅವರು ಗುರುತಿಸಬಹುದಾದಂಥ ಕೆಲ ನ್ಯಾಯತೀರ್ಪಿನ ವಿವರಣೆಗಳನ್ನು ಮತ್ತು ಉದಾಹರಣೆಗಳನ್ನು ಕೊಡಿರಿ. [10]James Moffatt, *The Bible: A New Translation* (New York: Harper & Brothers, 1954), 217.

[11]ಮುಂದಿನ ಪ್ರಸಂಗದಲ್ಲಿ ಕೊಡಲ್ಪಟ್ಟ 7:3-5ಕ್ಕೆ ಸಂಬಂಧಸಿದಂತ ಚಿತ್ರಿತವಾಗಿರುವ ಈ ಐದರ ಜೊತೆಯಿರುವ ಇನ್ನೊಂದು ಸಲಹೆಯೂ ಇದೆ. ಈ ಪ್ರಸಂಗದಲ್ಲಿ ಕಾರ್ಯಮಾಡಲು ನೀವು ಸೂಚಿಸಬಹುದಾಗಿದೆ. [12]ಲೂಕ 6:38ರಲ್ಲಿ ಆಶೀರ್ವಾದಗಳ ದೊಡ್ಡ ಪರಿಚ್ಛೇದವು ಕೊಡಲ್ಪಟ್ಟಿದೆ. ಸಾಮಾನ್ಯವಾಗಿ ಕೊಡುವುದರ ಬಗೆಗೆ ಅನ್ವಯವು ಮಾಡಲ್ಪಡುವುದಾಗಿದೆ. ಆದರೆ ಈ ಸಂದರ್ಭದಲ್ಲಿ ಇದು ವಿಶೇಷವಾಗಿ "ಕೊಡುವ" ಕರುಣೆಯು "ತೆಗೆದುಕೊಳ್ಳುವ" ಕರುಣೆಗೆ ಸೂಚಿಸುವುದಾಗಿದೆ. [13]John R. W. Stott, *The Message of the Sermon on the Mount* (Downers Grove, Ill.: Inter-Varsity Press, 1978), 177. [14]ಯಾರಿಗಾದರೂ ನ್ಯಾಯತೀರ್ಪಿನ ಆತ್ಮ ಹೊಂದಿರುವ ಭಾವನೆ ಹೊಂದಿದ್ದಾದರೆ ಅವನಿಗೆ ಒಂದು ಅವಕಾಶಮಾಡಿ.